**ದಿನಾಂಕ: 16.07.2022 ರಂದು ವಾರ್ಡ್ ಸಂಖ್ಯೆ: 184 ಉತ್ತರಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

---

**ವಾರ್ಡ್ ಕಮಿಟಿ ಸಭೆಗೆ ಹಾಜರಿದ್ದ ಅಧಿಕಾರಿಗಳು**

| ಕ್ರ.ಸಂ | ಹೆಸರು | ಪದನಾಮ/ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ ಡಿ.ಸುಂದರಯ್ಯ | ನೋಡಲ್ ಅಧಿಕಾರಿಗಳು | ಹಾಜರು |
| 2. | ಶ್ರೀ. ಕೆ.ವಿ. ವೆಂಕಟರಮಣ | ಸಹಾಯಕ ಅಭಿಯಂತರರು ವಾರ್ಡ್ ನಂ.184 | ಹಾಜರು |
| 3. | ಡಾ. ಸುದಾ. ಬಿ.ಕೆ | ಆರೋಗ್ಯ ಅಧಿಕಾರಿಗಳು, ಉತ್ತರಹಳ್ಳಿ | ಹಾಜರು |
| 4. | ಶ್ರೀ ಜಗದೀಶ್ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ | ಹಾಜರು |
| 5. | ಶ್ರೀ ವಿಜಯಕುಮಾರ್ | ಸಹಾಯಕ ಆರಕ್ಷಕ ನಿರೀಕ್ಷಕರು, ಸುಬ್ರಹ್ಮಣ್ಯಪುರ ಸಂಚಾರಿ ಪೋಲೀಸ್ ಠಾಣೆ | ಹಾಜರು |
| 6. | ಶ್ರೀ ಕೆ.ಎಸ್ ಹಿರೇಮಠ್ | ಪಿ.ಸಿ, 17008, ಸುಬ್ರಹ್ಮಣ್ಯ ಪುರ ಸಂಚಾರಿ ಪೋಲೀಸ್ ಠಾಣೆ | ಹಾಜರು |
| 7. | ಶ್ರೀ ನರಸಪ್ಪ | ಸಹಾಯಕರು, ತೋಟಗಾರಿಕೆ ಇಲಾಖೆ | ಹಾಜರು |
| 8. | ಶ್ರೀ ರವೀಂದ್ರ | ಮೇಲ್ವಿಚಾರಕರು, ಘನ ತ್ಯಾಜ್ಯ ನಿರ್ವಹಣೆ | ಹಾಜರು |

**ವಾರ್ಡ್ ಸಮಿತಿ ಸಭೆಗೆ ಹಾಜರಾದ ಸಮಿತಿ ಸದಸ್ಯರು**

1. ಶ್ರೀ. ಎಸ್.ಕೆ.ಸುಧೀಂದ್ರ- ಪೂರ್ಣಪ್ರಜ್ಞಾ ಬಡಾವಣೆಯ RWA
2. ಶ್ರೀ ಅರುಣ್- ಎ.ಜಿ.ಎಸ್ ಬಡಾವಣೆ RWA
3. ಶ್ರೀ ಅಮರ್.ಎಂ.ಆರ್- ಎ.ಜಿ.ಎಸ್ ಬಡಾವಣೆ RWA
4. ಶ್ರೀ ವಿಜಯಕುಮಾರ್ - ಬನಶಂಕರಿ 5ನೇ ಹಂತದ RWA
5. ಶ್ರೀ ವಸಂತ ಡಿ.ಎಸ್- ಬನಶಂಕರಿ 5ನೇ ಹಂತದ RWA

ಮೇಲೆ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ನೋಡಲ್ ಅಧಿಕಾರಿಯಾದ ಶ್ರೀ ಡಿ.ಸುಂದರಯ್ಯರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಪರಿಚಯದೊಂದಿಗೆ ವಿವರಿಸುತ್ತಾ ಸದರಿ ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳು/ ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

ಮು.ತಿ.ನೋ

Scanned with CamScanner

**1. ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂಧಪಟ್ಟಂತೆ**

- ಬನಶಂಕರಿ 5ನೇ ಹಂತದಲ್ಲಿರುವ ಕೆಂಗೇರಿ-ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿ ಒಳ ಚರಂಡಿ ಚೇಂಬರ್ ಉಕ್ಕಿ ಹರಿಯುತ್ತಿದ್ದು ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರು ಓಡಾಡಲು ತೊಂದರೆಯಾಗುತ್ತಿದ್ದು, ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯ ಬೂಸ್ಟರ್ ಪಂಪ್ ಅಳವಡಿಸಲು ಅಗೆದಿರುವ ಹೆಚ್ಚುವರಿ ಮಣ್ಣನ್ನು ಈ ಕೂಡಲೇ ತೆರವುಗೊಳಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಇಲಾಖೆ ರವರಿಗೆ ಸೂಚಿಸಿರುತ್ತಾರೆ

**2. ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ**

- ಪೂರ್ಣ ಪ್ರಜ್ಞಾ ಬಡಾವಣೆಯಲ್ಲಿರುವ ಪಾರ್ಕ್ ನಂ.5ನ್ನು ಸ್ವಚ್ಚಗೊಳಿಸಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕೋರಿರುತ್ತಾರೆ.
- ಬನಶಂಕರಿ 5ನೇ ಹಂತ ಎನ್.ಪಿ.ಎಸ್ ಶಾಲೆಯ ಬಳಿ ಇರುವ ಪಾರ್ಕಿನಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದು ಈ ಕೂಡಲೇ ಭದ್ರತಾ ಸಿಬ್ಬಂದಿ ನೇಮಿಸಲು ಕೋರಿರುತ್ತಾರೆ.
- ಬನಶಂಕರಿ 5ನೇ ಹಂತದ ಪಾರ್ಕಿನ ಬಳಿ ಇರುವ ಶೌಚಾಲಯ ನಿರ್ವಹಣೆ ಮಾಡಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯ RWA ಸದಸ್ಯರು ಪಾರ್ಕ್ ತೆರೆಯುವ ಸಮಯವನ್ನು ಮೊದಲಿನಂತೆ ಮುಂದುವರೆಸಲು ಮೇಲಧಿಕಾರಿಗಳ ಗಮನಕ್ಕೆ ತರಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಅಧೀಕ್ಷಕರು ತೋಟಗಾರಿಕೆ_ಇಲಾಖೆ ರವರಿಗೆ ಸೂಚಿಸಿರುತ್ತಾರೆ.

**3. ಸಂಚಾರಿ ಪೋಲೀಸ್ ಇಲಾಖೆಗೆ ಸಂಬಂಧಿಸಿದಂತೆ**

- ಎ.ಜಿ.ಎಸ್ ಬಡಾವಣೆಯ ಸರ್ವಜ್ಞ ಸರ್ಕಲ್ ನಲ್ಲಿ ಶಾಲಾ ವಲಯ ಸೂಚನಾ ಫಲಕವನ್ನು ಅಳವಡಿಸಲು ಕೋರಿರುತ್ತಾರೆ.
- ಬನಶಂಕರಿ 5 ನೇ ಹಂತ, ಎನ್.ಪಿ.ಎಸ್ ಶಾಲೆ ರಸ್ತೆಯಲ್ಲಿ ಶಾಲಾ ವಲಯ ಸೂಚನಾ ಫಲಕವನ್ನು ಅಳವಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಆರಕ್ಷಕ ನಿರೀಕ್ಷಕರು, ಸಂಚಾರಿ ಪೋಲೀಸ್ ಇಲಾಖೆ ರವರಿಗೆ ಸೂಚಿಸಿರುತ್ತಾರೆ.

-3-

Scanned with CamScanner

**4. ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ**

- ಪೂರ್ಣ ಪ್ರಜ್ಞಾ ಬಡಾವಣೆಯಲ್ಲಿ ಬರುವ ರಸ್ತೆ ಪಕ್ಕದ ಚರಂಡಿಗಳಲ್ಲಿ 12 ಮರಗಳು ಬೆಳೆದಿದ್ದು, ಮಳೆ ನೀರು ಸರಾಗವಾಗಿ ಹರಿಯದೇ ತೊಂದರೆ ಉಂಟಾಗುತ್ತಿದ್ದು, 12 ಮರಗಳನ್ನು ಈ ಕೂಡಲೇ ತೆರವುಗೊಳಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಅರಣ್ಯ ವಲಯಾಧಿಕಾರಿಗಳು ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ.

**5. ಸ.ಕಾ.ನಿ.ಅ ಉತ್ತರಹಳ್ಳಿ ಉಪವಿಭಾಗಕ್ಕೆ ಸಂಬಂಧಪಟ್ಟಂತೆ.**

- ಬನಶಂಕರಿ 5ನೇ ಹಂತದಲ್ಲಿರುವ ಚರಂಡಿಯ ಹೂಳನ್ನು ತೆಗೆಯಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ವಲಯ ಸಂಬಂಧಪಟ್ಟ ಕಾಮಗಾರಿ ಇಲಾಖೆ/ಇಂಜಿನಿಯರ್ ರವರಿಗೆ ಸೂಚಿಸಿರುತ್ತಾರೆ

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ.ಸುಂದರಯ್ಯ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಡಿ.ಸುಂದರಯ್ಯ
ನೋಡಲ್ ಅಧಿಕಾರಿ ಹಾಗೂ ಸ.ಕಾ.ನಿ.ಅ
ಅಂಜನಾಪುರ ಉಪವಿಭಾಗ

ಶ್ರೀ ವೆಂಕಟರಮಣ.ಕೆ.ವಿ
ಸಂಚಾಲಕರು ಹಾಗೂ ಸ.ಅ-184

Scanned with CamScanner